# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 04 ಬಿಎಸ್‌ಜಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ. 257, ವಿಧಾನಸೌಧ,
ಬೆಂಗಳೂರು, ದಿನಾಂಕ:08.12.2017

**ಇವರಿಂದ**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನಸೌಧ.

**ಇವರಿಗೆ**

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/
ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ

**ಮಾನ್ಯರೆ,**

ವಿಷಯ: 2017–18 ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಕಂತು) ವೆಚ್ಚ ಮಾಡಲು ಅನುಮತಿ ಪತ್ರ ನೀಡುವ ಕುರಿತು.

*****

2017–18 ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಕಂತು) ವಿಧಾನಮಂಡಲದ ಎರಡೂ ಸದನಗಳ ಮುಂದೆ 2017 ರ ನವೆಂಬರ್ ತಿಂಗಳಲ್ಲಿ ಮಂಡಿಸಿದ್ದು, ಇದಕ್ಕೆ ಸಂಬಂಧಿಸಿದ ಧನವಿನಿಯೋಗ ಮಸೂದೆಗೆ 2017 ರ ಡಿಸೆಂಬರ್ ತಿಂಗಳ ಏಳನೇ ದಿನಾಂಕದಂದು ಸನ್ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆ ದೊರೆತಿರುವುದಾಗಿ, ದಿನಾಂಕ:08.12.2017ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 56 ಶಾಸನ 2017ರಲ್ಲಿ ತಿಳಿಸಲಾಗಿದೆ. ಪೂರಕ ಅಂದಾಜುಗಳ (ಎರಡನೇ ಕಂತು) ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

2. ಈ ಮೊತ್ತವನ್ನು ಉಪಯೋಗಿಸಿಕೊಳ್ಳುವಾಗ ಮಿತವ್ಯಯ ಆದೇಶ ಮತ್ತು ಇತರೆ ಆರ್ಥಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ. ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 01 ಟಿಎಫ್‌ಪಿ 2017 ದಿನಾಂಕ: 05–04–2017ರನ್ವಯ ಪೂರಕ ಅಂದಾಜುಗಳಲ್ಲಿ ಒದಗಿಸಲಾದ ರೂ.10.00 ಕೋಟಿಗಳಿಗಿಂತ ಕಡಿಮೆ ಇರುವ ಮೊತ್ತವನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಲು ಇಲಾಖಾ ಕಾರ್ಯದರ್ಶಿಯವರಿಗೆ ಅಧಿಕಾರವಿರುತ್ತದೆ. **ಪೂರಕ ಅಂದಾಜುಗಳಲ್ಲಿ ಸೇರಿರುವ ರೂ.10.00 ಕೋಟಿಗಳಿಗಿಂತ ಹೆಚ್ಚಿರುವ ಪ್ರಕರಣಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ ಇಲ್ಲದೆ ಹಣವನ್ನು ಬಿಡುಗಡೆ ಮಾಡತಕ್ಕದ್ದಲ್ಲ.** ಪೂರಕ ಅಂದಾಜುಗಳು–2 ರಲ್ಲಿ ಹೊಸ ಯೋಜನೆಗಳಿಗೆ ಹಣವನ್ನು ಒದಗಿಸಿದ್ದಲ್ಲಿ ಅದನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆದ ನಂತರವೇ ಬಿಡುಗಡೆ ಮಾಡತಕ್ಕದ್ದು.

3. ಪೂರಕ ಅಂದಾಜುಗಳು–2 ರಲ್ಲಿ ಅವಕಾಶ ಮಾಡಿರುವ ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ನಗದು ಹಣ ಬಿಡುಗಡೆ ಮಾಡುವಂತಿಲ್ಲ:–

ಅ) ಈಗಾಗಲೇ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿ ಅದನ್ನು ಸಕ್ರಮಗೊಳಿಸಲು ಒದಗಿಸಿರುವ ಅನುದಾನಗಳು
ಆ) ಲೆಕ್ಕ ಹೊಂದಾಣಿಕೆ ಸಲುವಾಗಿ ಮಾಡಿರುವ ಆಯವ್ಯಯ ಅವಕಾಶಗಳು
ಇ) ಸಾದಿಲ್ವಾರು ನಿಧಿಗೆ ಮರುತುಂಬಲು ಒದಗಿಸಿರುವ ಅನುದಾನಗಳು

ಮುತಿನೋ..

4. ಪೂರಕ ಅಂದಾಜುಗಳು-2 ರಲ್ಲಿ ಸಾಂಕೇತಿಕ ಅನುದಾನವನ್ನು ಒದಗಿಸಿದ್ದಲ್ಲಿ, ಆ ಬಾಬ್ತಿಗೆ ಪುನರ್ವಿನಿಯೋಗದ ಮೂಲಕ ವೆಚ್ಚಕ್ಕೆ ಬೇಕಾದ ಮೊತ್ತವನ್ನು ಒದಗಿಸಿಕೊಂಡು ಹಣ ಬಿಡುಗಡೆ ಮಾಡುವುದು.

5. ಯಾವುದೇ ಕಾರಣಕ್ಕಾಗಿ ಪೂರಕ ಅಂದಾಜುಗಳಲ್ಲಿ ಒದಗಿಸಿರುವ ಮೊತ್ತವನ್ನು ಭಾಗಶ: ಅಥವಾ ಪೂರ್ಣವಾಗಿ ಉಪಯೋಗಿಸಲು ಆಗದಿದ್ದಲ್ಲಿ, ದಿನಾಂಕ: 31.03.2018 ರ ಒಳಗಾಗಿ ಸರ್ಕಾರಕ್ಕೆ ಅಧ್ಯರ್ಪಣೆ ಮಾಡಬೇಕು.

ತಮ್ಮ ನಂಬುಗೆಯ,

(ಜಿ.ಸಿಂಧು)
ಸರ್ಕಾರದ ಉಪ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಪ್ರತಿಗಳು :1) ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, (ಪುಸ್ತಕ-2), ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಚೀಲ ಸಂಖ್ಯೆ : 5329/5369, ಬೆಂಗಳೂರು-560 001.

2. ಪ್ರಧಾನ ಮಹಾಲೇಖಪಾಲರು, ಲೆಕ್ಕ ತನಿಖೆ-1, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಚೀಲ ಸಂಖ್ಯೆ : 5329/5369, ಬೆಂಗಳೂರು-560001.
3. ಮಹಾಲೇಖಪಾಲರು, ಲೆಕ್ಕ ತನಿಖೆ-2, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಚೀಲ ಸಂಖ್ಯೆ: 5329/5369, ಬೆಂಗಳೂರು-560001.
4. ಸಂಬಂಧಪಟ್ಟ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ
6. ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲಗಳು), ಆರ್ಥಿಕ ಇಲಾಖೆ.
7. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ.
8. ಸರ್ಕಾರದ ಕಾರ್ಯದರ್ಶಿ (ಆರ್ಥಿಕ ಆಯೋಗ ಕೋಶ), ಆರ್ಥಿಕ ಇಲಾಖೆ.
9. ಸರ್ಕಾರದ ಉಪ ಕಾರ್ಯದರ್ಶಿ(ಆ ಮತ್ತು ಸಂ)/ಆಡಳಿತ/ಕಲ್ಯಾಣ/ಆರ್ಥಿಕ ಇಲಾಖೆ.
10. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
11. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಜಿಲ್ಲಾಪಂಚಾಯತ್. ಆರ್ಥಿಕ ಇಲಾಖೆ.
12. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ).
13. ಆಡಳಿತ ಇಲಾಖೆಗಳ ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳಿಗೆ.
14. ಶಾಖಾಧಿಕಾರಿ, ಆಯವ್ಯಯ ಸಂಕಲನ, ವೆಚ್ಚ-1 ರಿಂದ 12, ವಾಣಿಜ್ಯ ತೆರಿಗೆಗಳು-1 ಮತ್ತು 2, ಅಬಕಾರಿ, ಆಡಳಿತ, ಮುಂಗಡಗಳು, ವಿತ್ತೀಯ ಸುಧಾರಣಾ ಕೋಶ, ಲೋಕೋಪಯೋಗಿ, ಆರ್ಥಿಕ ಕೋಶ 1 ಮತ್ತು 2, ಆರ್ಥಿಕ ಇಲಾಖೆ.
15. ನಿರ್ದೇಶಕರು, ಖಜಾನೆ ಇಲಾಖೆ, ಮೊದಲನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001.
16. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಎರಡನೇ ಮಹಡಿ, ಖನಿಜ ಭವನ, ಸಂಖ್ಯೆ. 49, ಶ್ರೀ ಡಿ. ದೇವರಾಜ ಅರಸು ರಸ್ತೆ, ಬೆಂಗಳೂರು-560 001.
17. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.